



ಸಂತೇಕೊಪ್ಪಲು ಕಲ್ಯಾಣಿಯ ಪುನಶ್ಚೇತನಕ್ಕೆ ಟೊಂಕ ಕಟ್ಟಿರುವ ಸ್ತ್ರೀಶಕ್ತಿ



ಸಂತೇಕೊಪ್ಪಲು ಜಲತಾವಿನೊಳಗೆ ಕಂಗೊಳಿಸುತ್ತಿರುವ ಶ್ರಮಶಕ್ತಿಯ ಫಲ

ಹೋದವು! ಸದ್ಯದ ನಮ್ಮ ಅಂದಾಜಿನಂತೆ ಹಾಸನ ಜಿಲ್ಲೆಯಲ್ಲಿ 800ರಿಂದ 1000 ಕಲ್ಯಾಣಿಗಳಿರುವ ಸಾಧ್ಯತೆ ಇದೆ. ಅದರ ಸಮೀಕ್ಷೆ ನಡೆಯಬೇಕಿದೆ.

ಮಾರ್ಚ್ 22ರ 'ವಿಶ್ವ ಜಲದಿನ'ದಿಂದ, ಏಪ್ರಿಲ್ 22ರ 'ವಿಶ್ವ ಭೂದಿನ'ದವರೆಗಿನ ಒಂದು ತಿಂಗಳ ಅವಧಿಯಲ್ಲಿ ಜಿಲ್ಲೆಯ ಪ್ರತಿ ಹಳ್ಳಿಯ ಕನಿಷ್ಠ ಯಾವುದಾದರೊಂದು ಪಾರಂಪರಿಕ ಜಲಮೂಲದ (ಕೆರೆ, ಕಲ್ಯಾಣಿ, ಕಟ್ಟೆ, ತೆರೆದಬಾವಿ) ಹೂಳೆತ್ತಿ, ಪುನಶ್ಚೇತನಗೊಳಿಸುವ ಬೃಹತ್ ಜಲಾಂದೋಲನವನ್ನು ರಾಷ್ಟ್ರೀಯ ಹಬ್ಬದ ರೀತಿ ಹಮ್ಮಿಕೊಳ್ಳಲು ನಿರ್ಧಾರ ಮಾಡಿದೆವು. ತಾಲ್ಲೂಕುಮಟ್ಟದ ಸಂಬಂಧಿಸಿದ ಅಧಿಕಾರಿಗಳ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ, ಆಸಕ್ತ ಸಂಘ ಸಂಸ್ಥೆಗಳ ಮುಖಂಡರಿಗಾಗಿ ಜಿಲ್ಲೆಯ ಎಂಟೂ ತಾಲ್ಲೂಕುಗಳ ಪಂಚಾಯತ್ ಭವನದಲ್ಲಿ ಹಸಿರುಭೂಮಿ ಪ್ರತಿಷ್ಠಾನದಿಂದ ಕಾರ್ಯಾಗಾರಗಳನ್ನೂ ನಡೆಸಲಾಯ್ತು. ಆದರೆ ಅಷ್ಟರಲ್ಲಾಗಲೇ ದೇಶಾದ್ಯಂತ ಕೊರೊನಾ ವ್ಯಾಪಕವಾಗಿ ಹಬ್ಬಿ, ನಾವು ಜಲಾಂದೋಲನ ಹಮ್ಮಿಕೊಳ್ಳಬೇಕಿದ್ದ ಮಾರ್ಚ್ 22ರಂದೇ ಲಾಕ್‌ಡೌನ್ ಘೋಷಿಸಲಾಯ್ತು!

ಹೊರಗೆ ಹೋಗಿ ಏನೂ ಮಾಡದ ಸ್ಥಿತಿ ಕೊರೊನಾದಿಂದ ನಿರ್ಮಾಣವಾದುದರಿಂದ, ತಾಲ್ಲೂಕು ಮತ್ತು ಗ್ರಾಮ ಪಂಚಾಯತ್ ಅಧಿಕಾರಿಗಳು, ಹಸಿರುಭೂಮಿ ಪ್ರತಿಷ್ಠಾನದ ಪದಾಧಿಕಾರಿಗಳು, ಪರಿಸರ–ಜಲ ತಜ್ಞರು, ಪರಿಸರ ಪ್ರೇಮಿಗಳು, ಸ್ಥಳೀಯರಾಗಿದ್ದೂ ಅನಿವಾರ್ಯವಾಗಿ ಹಾಸನದಿಂದ ಹೊರಗಿರುವ ಅಧಿಕಾರಿಗಳು, ಪತ್ರಕರ್ತರು, ಆಸಕ್ತರು – ಹೀಗೆ ಎಲ್ಲರನ್ನೂ ಒಗ್ಗೂಡಿಸಿ ವಾಟ್ಸ್‌ಆಪ್ ಗುಂಪು ರೂಪಿಸಲಾಯಿತು. ಆ ಗುಂಪಿನ ಮೂಲಕ ಜಲಸಂವರ್ಧನೆಯ ಮಾದರಿಗಳನ್ನು ಹಂಚಿಕೊಳ್ಳುವ, ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನಗಳು ನಡೆಯುತ್ತಿವೆ.

ಕೊರೊನಾ ಬಿಗುವು ಕಡಿಮೆಯಾದ ನಂತರ ಕಲ್ಯಾಣಿಗಳ ಪುನಶ್ಚೇತನದ ಕೆಲದ ಮತ್ತೆ ಆರಂಭವಾಗಿದೆ. ಈ ಕಾರ್ಯಕ್ರಮಗಳಲ್ಲಿ ಗ್ರಾಮಗಳ ಜನರು, ಸ್ಥಳೀಯ ಪಿಡಿಓಗಳು, ಪಂಚಾಯತ್ ಸಿಬ್ಬಂದಿ, ಆಶಾ/ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಸ್ವಸಹಾಯ ಗುಂಪಿನವರನ್ನು ಒಳಗೊಳ್ಳಲಾಗಿದೆ. ಹಸಿರುಭೂಮಿ ಪ್ರತಿಷ್ಠಾನದ ಮನವಿಯ ಮೇರೆಗೆ, ಗ್ರಾಮಗಳಿಗೆ ವಾಪಸ್ಸಾಗಿರುವ ಜನರಿಗೆ ಆರ್ಥಿಕ ಸ್ವಾವಲಂಬನೆಗೆ ಅನುಕೂಲವಾಗಲೆಂದು ಕಲ್ಯಾಣಿಗಳ ಪುನಶ್ಚೇತನಕ್ಕೆ ನರೇಗಾ ಯೋಜನೆಯನ್ನೂ ಜೋಡಿಸಿ ಜಿಲ್ಲಾಪಂಚಾಯತ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು ವಿಶೇಷ ಆದೇಶವನ್ನೂ ಮಾಡಿಕೊಟ್ಟಿದ್ದಾರೆ. ಅವಶ್ಯಕತೆ ಇರುವೆಡೆ ನರೇಗಾ ಯೋಜನೆಯನ್ನು ಕಲ್ಯಾಣಿ ಹೂಳೆತ್ತಲು ಬಳಸಿದ್ದೇವೆ. ಹೆಚ್ಚಿನದನ್ನು ಗ್ರಾಮದ ಜನರು ಉತ್ಸಾಹದಿಂದ ಶ್ರಮದಾನದ ಮೂಲಕವೇ ಪುನಶ್ಚೇತನ ಮಾಡಿದ್ದಾರೆ.





ಪುನಶ್ಚೇತನದ ಹಾದಿಯಲ್ಲಿ ಹೊನ್ನಾವರದ ಕಲ್ಯಾಣಿ

ಕಡಿಮೆ ಅವಧಿಯಲ್ಲಿ ಅತ್ಯಂತ ಶ್ರಮವಹಿಸಿ ಈ ಬಾರಿ 27 ಜಲಮೂಲಗಳನ್ನು ಹೂಳೆತ್ತಿ ಪುನಶ್ಚೇತನಗೊಳಿಸಲು ಸಾಧ್ಯವಾಗಿದೆ. ಹಲವು ಕಲ್ಯಾಣಿಗಳಲ್ಲಿ ಮೊದಲ ದಿನವೇ ನೀರು ಕಾಣಿಸಿದೆ. ಮತ್ತೆ ಕೆಲವುಗಳಲ್ಲಿ ಒಂದೆರಡು ದಿನ ಕಳೆದು ಶೇಖರವಾಗಿದೆ. ಮಿಕ್ಕವುಗಳಲ್ಲಿ ಮಳೆ ಬಂದ ನಂತರವೂ ಶೇಖರವಾಗಿದೆ.

ಆಸಕ್ತರೆಲ್ಲರೂ ಒಗ್ಗೂಡಿ ಶ್ರಮಿಸಿದರೆ ಸಮಾಜದಲ್ಲಿ ಮತ್ತು ಪರಿಸರದಲ್ಲಿ ಬದಲಾವಣೆ ತರಲು ಸಾಧ್ಯ ಎಂಬುದಕ್ಕೆ ಹಾಸನ ಜಿಲ್ಲೆಯಲ್ಲಿನ ಜನಾಂದೋಲನದ ಕೆಲಸ ಒಂದು ಉತ್ತಮ ಮಾದರಿ. ಪ್ರಸ್ತುತ ಪುನಶ್ಚೇತನಗೊಂಡಿರುವ ಜಲಮೂಲಗಳನ್ನು ಗ್ರಾಮಸ್ಥರ ಮೂಲಕ ನಿರ್ವಹಣೆ ಮಾಡಿಸುವ ಜವಾಬ್ದಾರಿಯನ್ನು ಸಂಬಂಧಿಸಿದ ಪಂಚಾಯತ್‌ಗಳು ವಹಿಸಿಕೊಳ್ಳಬೇಕು; ಪಂಚಾಯತ್‌ಗಳು, ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಪಾಳು ಬಿದ್ದ ಕೆರೆ, ಕಟ್ಟೆ, ಕಲ್ಯಾಣಿ, ತೆರೆದ ಬಾವಿಗಳ ಪುನಶ್ಚೇತನಕ್ಕೆ ಮುಂದಾಗಬೇಕೆಂಬುದು ಹಸಿರುಭೂಮಿ ಪ್ರತಿಷ್ಠಾನದ ಆಶಯ. ಮುಂದಿನ 2–3 ವರ್ಷಗಳಲ್ಲಿ ಹಾಸನ ಜಿಲ್ಲೆಯನ್ನು ಜಲ ಸ್ವಾವಲಂಬನೆಯ ಮಾದರಿ ಜಿಲ್ಲೆಯಾಗಿಸಬೇಕೆಂಬ ಕನಸು ನಮ್ಮ ಹಸಿರುಭೂಮಿ ಪ್ರತಿಷ್ಠಾನದ್ದು. 'ಹಸಿರುಭೂಮಿ'ಯ ಕರುಳುಬಳ್ಳಿಗಳು ನಾಡಿನಾದ್ಯಂತ ಹಬ್ಬಿದರೆ, ಜಲ ಸಮೃದ್ಧಿ ಕರ್ನಾಟಕ ರೂಪುಗೊಳ್ಳುವುದು ಕಷ್ಟವೇನಲ್ಲ.

ಪ್ರತಿಕ್ರಿಯಿಸಿ: feedback@sudha.co.in